



ಬಾ ಅವರ ಕೊರಳಿನಲ್ಲಿದ್ದ ಬಂಗಾರದ ಹಾರ ಮಾತ್ರ ಉಳಿದಿತ್ತು. ಕಡೆಗೆ ಬಾಪೂ ಆ ಹಾರವನ್ನು ಯಾಚಿಸಿದರು.

'ನೀವೇನು ಮಾಡಬೇಕೆಂದು ಬಯಸುತ್ತೀರ?' ಬಾ ಕಳವಳದಿಂದ ಕೇಳಿದರು.

'ನೋಡು' ಬಾಪೂ ಶಾಂತಿಯಿಂದ ಹೇಳಿದರು, 'ನಮಗೆ ಸಿಕ್ಕಿರುವ ಉಡುಗೊರೆಗಳನ್ನು ಈ ದೇಶ ನಮ್ಮ ಸೇವೆಯನ್ನು ಗಮನದಲ್ಲಿಟ್ಟುಕೊಂಡು ಕೊಟ್ಟಿದೆ... ಇವು ದೇಶದ ಒಳಿತಿಗಾಗಿಯೇ ಬಳಕೆಯಾಗಬೇಕು. ನಾವು ಎಲ್ಲಾ ಉಡುಗೊರೆಗಳನ್ನು ಮರಳಿಸಿ, ಒಂದು ಟ್ರಸ್ಟ್ ರಚಿಸಿ ದೇಶಕ್ಕೆ ಒಪ್ಪಿಸೋಣ, ಈ ಬಗ್ಗೆ ಲೆಕ್ಕಪತ್ರಗಳನ್ನು ಸಹ ಕೊಡೋಣ'

'ನಿಮಗೆ ಒಡವೆಗಳ ಅಗತ್ಯವಿಲ್ಲದಿರಬಹುದು' ಬಾ ವ್ಯಾಕುಲಗೊಂಡರು, 'ಹರಿಲಾಲ ಈಗ ದೊಡ್ಡವನಾಗಿದ್ದಾನೆ. ನಾಳೆ ಮನೆಗೆ ಸೊಸೆಯನ್ನು ತರಬೇಕಾಗುವುದು. ನೀವು ನನ್ನನ್ನು ಒಡವೆಗಳಿಲ್ಲದವಳಂತೆ ಮಾಡಿಬಿಡ್ಡಿದ್ದೀರಿ. ಆದರೆ ನಾನು ನನ್ನ ಸೊಸೆಗೆ ಹೀಗಿರಲು ಬಿಡುವುದಿಲ್ಲ...'

'ನಾವು ಹರಿಲಾಲನನ್ನೇ ಕೇಳೋಣ...' ಬಾಪೂ ಹದಿಮೂರನೇ ವಯಸ್ಸಿನ ಹರಿಲಾಲನನ್ನು ನೋಡುತ್ತಾ ಅವನನ್ನು ಬಾಲಕ ನ್ಯಾಯಾಧೀಶನನ್ನಾಗಿ ಮಾಡಿದರು, 'ಹೇಳು ಹರಿ, ದೇಶದ ಸೇವೆಗೆ ಲಭಿಸಿದ ಆಭರಣಗಳನ್ನು ಧರಿಸುವುದು ನಿನಗಿಷ್ಟವಾಗುವುದೋ ಅಥವಾ ಇನ್ನೊಬ್ಬರು ಧರಿಸುವುದನ್ನು ನೋಡಲು ನಿನಗಿಷ್ಟವಾಗುವುದೋ?'

ಅವನಿಗೆ ಉಡುಗೊರೆಯ ರಾಶಿಯಲ್ಲಿ ಬೆಳ್ಳಿ ಚೈನಿನ ಸುಂದರ ಒಂದು ಗಡಿಯಾರವೂ ಇತ್ತು. ಹರಿಲಾಲನಿಗೆ ಆ ಗಡಿಯಾರ ತುಂಬಾ ಇಷ್ಟವಾಗಿತ್ತು. ಅವನು ಆಗಾಗ ಅದನ್ನು ತನ್ನ ಕೈಯಿಂದ ನೇವರಿಸುತ್ತಿದ್ದ. ಈಗಲೂ ಅವನ ಕೈ ಗಡಿಯಾರದ ಚೈನಿನ ಮೇಲಿತ್ತು. ಬಾಪೂ ಅವರ ಪ್ರಶ್ನೆಯನ್ನು ಕೇಳಿ ಅವನ ಕೈ ದೂರಕ್ಕೆ ಸರಿಯಿತು.

'ಬಾ,' ಹರಿಲಾಲ ಬಾರನ್ನು ನೋಡುತ್ತಾ ಹೇಳಿದ, 'ಬಾಪೂ ಹೇಳುವುದು ಸರಿ. ಈ ಒಡವೆಗಳಿಂದ ನಮಗೇನಾಗಬೇಕಿದೆ? ನಮಗೆ ಅಗತ್ಯ ಬಿದ್ದರೆ ಹೊಸದನ್ನು ಮಾಡಿಸಿಕೊಳ್ಳೋಣ.'

ಬಾ ಅವರಿಗೆ ಆಶ್ಚರ್ಯವಾಗಿತ್ತು. ಅವರು ಅಕಸ್ಮಾತ್ ಹರಿಲಾಲನನ್ನು ತಮ್ಮ ಮಡಿಲಿನಲ್ಲಿ ಕೂರಿಸಿಕೊಂಡು ಮೆಲ್ಲನೆ ಹೇಳಿದರು, 'ನಿನಗಿವೆಲ್ಲಾ ಅರ್ಥವಾಗದು, ಹರಿ. ನಾನು ನಿನ್ನನ್ನು ಸಂತ ಅಥವಾ ಭಿಕ್ಷುಕ ಮಾಡಬೇಕಿಲ್ಲ...ಇನ್ನೂ ನಿನ್ನ ವಿದ್ಯಾಭ್ಯಾಸದ ಬಗ್ಗೆಯೇ ನಿರ್ಧಾರವಾಗಿಲ್ಲ... ಇಲ್ಲ...ಈ ಒಡವೆಯನ್ನು ನಾನು ನಿಮ್ಮೆಲ್ಲಾ ಸಹೋದರರಿಗಾಗಿ ಇಟ್ಟು ಕೊಳ್ಳುತ್ತೇನೆ.'

'ಬಾ, ನೀವು ನಮಗೋಸ್ಕರ ಈ ಒಡವೆಯನ್ನಿಟ್ಟುಕೊಳ್ಳಲು ಬಯಸುತ್ತೀರ ತಾನೇ?...' ಹರಿಲಾಲ ಬಾ ಅವರನ್ನು ಬಿಗಿಯಾಗಿ ಅಪ್ಪಿಕೊಂಡು ಹೇಳಿದ್ದ, 'ಆದರೆ ನಮಗೇ ಈ ಒಡವೆ ಬೇಡವಾದಾಗ, ನೀವೇನು ಮಾಡುತ್ತೀರ? ಇವೆಲ್ಲವೂ ಬಾಪೂ ಅವರ ಸೇವೆಗೆ ಪ್ರತಿಫಲವಾಗಿ ಸಿಕ್ಕಿವೆ.'

'ಇದರಲ್ಲಿ ನನ್ನ ಸೇವೆ ಏನೂ ಇಲ್ಲವೇ?' ಬಾ ತೀಕ್ಷ್ಣವಾಗಿ ಪ್ರಶ್ನಿಸಿದರು, 'ಈ ಮನೆಯನ್ನು ನಡೆಸಲು ನಾನು ಹಗಲುರಾತ್ರಿ ದುಡಿದಿದ್ದೇನೆ, ಇದು ಸೇವೆ ಅಲ್ಲವೇ? ನನ್ನನ್ನು ಯಾವ ಯಾವ ಮನೆಯಲ್ಲಿದ್ದೆನೋ, ಅಲ್ಲೆಲ್ಲಾ ಎಲ್ಲರ ಚಾಕರಿಯನ್ನು ಮಾಡಿದ್ದೇನೆ, ಇದನ್ನು ಸೇವೆ ಎನ್ನಲಾಗದೆ?'

'ಇದನ್ನೇ ಮನೆಯನ್ನು ನಡೆಸಿಕೊಂಡು ಹೋಗುವುದು ಎನ್ನುತ್ತಾರೆ...' ಬಾಪೂ ನಡುವೆ ತಡೆದು ಹೇಳಿದರು, 'ನನ್ನ ಸೇವೆಗೆ ಸಿಕ್ಕಿರುವ ಉಡುಗೊರೆಯನ್ನು ನಾನು ಕೊಡುವುದಿಲ್ಲ.'

ಕಡೆಗೆ ಬಾ ಮೌನವಹಿಸಿದರು. ಪ್ರತಿ ಬಾರಿಯಂತೆ ಅವರು ಎರಡು ಹನಿ ಕಣ್ಣೀರನ್ನು ಹಾಕಿ ಬಾಪೂ ಅವರ ಆಸೆಗೆ ಮನ್ನಣೆಯನ್ನು ನೀಡಿದರು. ಅವರು ಬಂಗಾರದ ಆ ಸುಂದರ ಹಾರವನ್ನು ತಮ್ಮ ಕೊರಳಿನಿಂದ ಕಳಚಿ ಬಾಪೂ ಅವರ ಪಾದಗಳ ಬಳಿ ಇಟ್ಟರು. ಆಗ ಬಾಪೂರವರ ಮುಖದಲ್ಲಿ ಪ್ರಸನ್ನತೆಯ ಭಾವನೆ ಉಕ್ಕಿ ಬಂದಿತ್ತು; ಅದನ್ನೆಂದೂ ಹರಿಲಾಲ ಇದುವರೆಗೆ ಮರೆಯಲು ಸಾಧ್ಯವಾಗಿರಲಿಲ್ಲ. ಬಾಪೂ ಅವರ ಮುಖದಲ್ಲಿ ಮೂಡಿದ್ದ ಸಂತಸವನ್ನು ಕಂಡು ಹರಿಲಾಲ ಆಗ, ಬಹುಶಃ ಈ ಸಂತಸಕ್ಕಾಗಿಯೇ ತಾನು ಬಾ ಅವರಿಗೆ ತಿಳಿ ಹೇಳಿದ್ದೆ ಎಂದು ಅನ್ನಿಸಿತು. ಇದರಿಂದಾಗಿ ಅವನಿಗೆ ತುಂಬಾ ಸಂತೋಷವಾಯಿತು. ಬಾಪೂ ಅವರಂತೆ ತಾನೂ ತ್ಯಾಗ ಮಾಡಬೇಕೆಂಬ ವಿಚಾರ ಮಾತ್ರದಿಂದಲೇ ಅವನ ಎದೆ ಉಬ್ಬಿ ಅಗಲಗೊಂಡಿತ್ತು. ಬಾಪೂ ಮಾಡಿದಂಥ ತ್ಯಾಗವನ್ನು ತಾನೂ ಮಾಡಬಲ್ಲೆ ಎಂಬುದು ಸಾಬೀತಾಗಿತ್ತು. ಇನ್ನು ಅವನು ಬಾಪೂ ಅವರಂತೆಯೇ ವಿದ್ಯಾಭ್ಯಾಸವನ್ನು ಮಾಡುತ್ತೇನೆ, ಬಾಪೂ ಅವರಂತೆಯೇ ದೇಶದ ಸೇವೆಯನ್ನು ನಾನು ಮಾಡಬಲ್ಲೆ ಹಾಗೂ ಬ್ರಿಟಿಷರ ವಿರುದ್ಧ ಹೋರಾಟವನ್ನೂ ಮಾಡುತ್ತೇನೆ ಎಂದು ನಿರ್ಧರಿಸಿದ.

ಹಿಂದೂಸ್ತಾನಕ್ಕೆ ಮರಳಿ ಬಂದ ನಂತರ ಬಾಪೂ ಹರಿಲಾಲನನ್ನು ಮತ್ತೆ ಶಾಲೆಗೆ ಕಳುಹಿಸಿದರು, ಆ ಸಂದರ್ಭದ ನೆನಪಾಗುತ್ತಲೇ ಹರಿಲಾಲನ ತುಟಿಗಳಲ್ಲಿ ಮಂದ ಮುಗುಳ್ನಗೆ ಮೂಡಿತು. ಆಗ ಬಾಪೂ ಅವರ ಬಳಿ ಇಬ್ಬರು ವಿದ್ಯಾರ್ಥಿಗಳಿದ್ದರು ಖುದ್ದು ಹರಿಲಾಲ ಮತ್ತು ಹರಿಲಾಲನ ಸೋದರತ್ತೆ ಗೋಕಿಯ ಮಗ ಗೋಕುಲದಾಸ್. ಗೋಕುಲದಾಸ ಸಹ ಹರಿಲಾಲನ ವಯಸ್ಸಿನವನೇ ಆಗಿದ್ದ, ಬಾಪೂ ಅವನನ್ನು ಸಹ ಮಗನೆಂದೇ ತಿಳಿದಿದ್ದರು.

'ಹರಿಲಾಲ,' ಬಾಪೂ ಇಬ್ಬರನ್ನು ಕರೆದು ಹೇಳಿದರು, 'ವಿದ್ಯಾಭ್ಯಾಸಕ್ಕಾಗಿ ಎರಡು ಉತ್ತಮ ಸ್ಥಳಗಳಿವೆ. ಮೊದಲನೆಯದರು ಬನಾರಸ್, ಎರಡನೆಯದು ಗೋಂಡಲ್. ನಿಮ್ಮಲ್ಲಿ ಒಬ್ಬನನ್ನು ಅಧ್ಯಯನಕ್ಕೆ ಕಾಶಿಗೆ ಕಳುಹಿಸಬೇಕು, ಇನ್ನೊಬ್ಬನನ್ನು ಗೋಂಡಲ್‌ಗೆ ಕಳುಹಿಸಬೇಕು ಎಂಬುದು ನನ್ನಾಸೆಯಾಗಿದೆ...ಹೇಳಿ, ಕಾಶಿಗೆ ಯಾರು ಹೋಗುವಿರಿ? ಗೋಂಡಲ್‌ಗೆ ಯಾರು ಹೋಗುವಿರಿ?'

ಹರಿಲಾಲ ಮತ್ತು ಗೋಕುಲದಾಸ ಇಬ್ಬರು ಪರಸ್ಪರ ನೋಡಿಕೊಂಡರು. ಇಬ್ಬರಲ್ಲಿ ಯಾರೂ ಸಹ ಬಾಪೂ ಅವರ ಪ್ರಶ್ನೆಗೆ ಉತ್ತರವನ್ನು ಕೊಡಲು ಸಾಧ್ಯವಿರಲಿಲ್ಲ. ಗೋಂಡಲ್ ಹೆಸರನ್ನು ಇಬ್ಬರೂ ಕೇಳಿದ್ದರು, ಆದರೆ ಕಾಶಿ ಎಲ್ಲಿದೆ ಎಂಬುದು ಇಬ್ಬರಿಗೂ ಗೊತ್ತಿರಲಿಲ್ಲ. 'ನಾವೊಂದು ಕೆಲಸ ಮಾಡೋಣ,' ಬಾಪೂ ಅವರೇ ಈ ಸಮಸ್ಯೆಗೆ ಪರಿಹಾರವನ್ನು ಸೂಚಿಸಿದರು. 'ನನ್ನ ಒಂದು ಮುಷ್ಟಿಯಲ್ಲಿ ಒಂದು ರೂಪಾಯಿಯ ನಾಣ್ಯವಿದೆ, ಇನ್ನೊಂದರಲ್ಲಿ ಒಂದು ನಯಾಪೈಸೆಯ ನಾಣ್ಯವಿದೆ. ನನ್ನ ಯಾವ ಮುಷ್ಟಿಯಲ್ಲಿ ಒಂದು ರೂಪಾಯಿಯ ನಾಣ್ಯವಿದೆ ಎಂದು ಯಾರು ಹೇಳುವರೋ, ಅವರನ್ನು ಕಾಶಿಗೆ ಅಧ್ಯಯನಕ್ಕಾಗಿ ಕಳುಹಿಸುವೆ. ಇನ್ನೊಬ್ಬನನ್ನು ಗೋಂಡಲ್‌ಗೆ ಕಳುಹಿಸುವೆ...ಹೇಳಿ, ಒಪ್ಪಿಗೆಯೇ?'

ಹರಿಲಾಲ ಮತ್ತು ಗೋಕುಲದಾಸ ಇಬ್ಬರಿಗೆ ಬಾಪೂ ಅವರ ಈ ಉಪಾಯದಲ್ಲಿ ಮಜವಿದೆ ಎಂದು ಅನ್ನಿಸಿತು.

'ಆಗಲಿ' ಇಬ್ಬರು ಹೇಳಿದರು.

ಮರುಕ್ಷಣವೇ ಬಾಪೂ ಅವರ ಬಲಗಡೆ ಮುಷ್ಟಿಯ ರೂಪಾಯಿ ನಾಣ್ಯ ಗೋಕುಲದಾಸನ ಪಾಲಿಗೆ ಬಂದಿತು. ಹರಿಲಾಲನ ಪಾಲಿಗೆ ತಾಮ್ರದ ನಯಾಪೈಸೆ ಬಂದಿತು. ಗೋಕುಲದಾಸ ಕಾಶಿಗೆ ಅಧ್ಯಯನಕ್ಕೆ ಹೋಗುವ ತೀರ್ಮಾನವಾಯಿತು, ಹರಿಲಾಲನನ್ನು ಗೋಂಡಲ್ ಶಾಲೆಗೆ ದಾಖಲಿಸಲು ನಿರ್ಧರಿಸಲಾಯಿತು. ಆದರೆ ಗೋಂಡಲ್ ಪ್ರವಾಸ ಹೆಚ್ಚು ದಿನ ನಡೆಯಲಿಲ್ಲ. ವಿದ್ಯಾರ್ಥಿ ನಿಲಯದಲ್ಲಿ ದಾಖಲಾದ ಹರಿಲಾಲ ಗೋಂಡಲ್ ಶಾಲೆಯಲ್ಲಿ ಹೆಚ್ಚು ದಿನಗಳು ವಿದ್ಯಾಭ್ಯಾಸವನ್ನು ಮಾಡದಾದ. ವಿದ್ಯಾರ್ಥಿ ನಿಲಯದ ವ್ಯವಸ್ಥೆಯನ್ನು ನೋಡಿ ಬಾಪೂ ರೇಗಿದ್ದರು. ಇಂಥ ವಿದ್ಯಾರ್ಥಿ ನಿಲಯದಲ್ಲಿ ಮಗನನ್ನು ಒಂಟಿಯಾಗಿ ಬಿಟ್ಟರೆ ಅವನ ಸಂಸ್ಕಾರಗಳು ಹಾಳಾಗುತ್ತವೆ ಎಂದು ಯೋಚಿಸಿ, ಅವನನ್ನು ಕೆಲವೇ ದಿನಗಳಲ್ಲಿ ರಾಜಕೋಟಕ್ಕೆ ಕರೆಸಿಕೊಂಡರು.

ಹಿಂದೂ ಮಹಾಸಾಗರದ ನೀರು ಈಗ ಮಲಿನವಾಗಿದೆ ಎಂದು ಅನ್ನಿಸುತ್ತಿತ್ತು. ಹಡಗು ಆಗಾಗ ಕಂಪಿಸುತ್ತಿತ್ತು. ಅದರ ಡೆಕ್‌ನಲ್ಲಿ ರೇಲಿಂಗ್ ಹಿಡಿದು ನಿಂತ ಹರಿಲಾಲ ಓಲಾಡುತ್ತಿದ್ದ. ಗಾಳಿಯಲ್ಲಿ ಸರಸರ ಸದ್ದು ಹೆಚ್ಚಿತ್ತು... ಹಾಗೂ... ದೂರದಿಂದ ಕಪ್ಪು, ದಟ್ಟಮೋಡಗಳು ಗರ್ಜಿಸುತ್ತಿದ್ದವು. ಒಂದು ವೇಳೆ ಮಳೆ ಬಂದರೆ ಡೆಕ್‌ನಲ್ಲಿ ನಿಲ್ಲುವುದು ಕಷ್ಟವಾಗುವುದು.

ಆದರೆ ಈ ಮೋಡಗಳು ಮಳೆಗರೆಯುವುದಕ್ಕೆ ಇನ್ನೂ ತಡವಿತ್ತು. ಗೋಂಡಲ್‌ಗೆ ಹೋಲಿಸಿದರೆ ರಾಜಕೋಟದಲ್ಲಿರುವುದು ಮತ್ತು ಅಲ್ಲಿ ಓದುವುದು ಹರಿಲಾಲನಿಗೆ ಹೆಚ್ಚು ಇಷ್ಟವಾಗುತ್ತಿತ್ತು. ಗೋಂಡಲ್‌ನಲ್ಲಿ ಬೇರೆ ಸಂಗತಿಗಳು ಸರಿಯಿದ್ದರೂ, ಬಾಪೂರವರ ಜೊತೆ ಸಿಗಲು ಹೇಗೆ ಸಾಧ್ಯವಿತ್ತು? ಒಂಟಿತನದ ಆ ದಿನಗಳನ್ನು ನೆನಪಿಸಿಕೊಂಡ ಹರಿಲಾಲನಿಗೆ ಈಗಲೂ ತೀವ್ರ ಬೇಸರ ಕಾಡಿತು. ಆದರೆ ಹರಿಲಾಲನ ಅದೃಷ್ಟದಲ್ಲಿ ಪರಿವಾರದವರೊಂದಿಗೆ ಇರುವುದು ಬಹುಶಃ ಬರೆದಿರಲಿಲ್ಲ. ರಾಜಕೋಟಕ್ಕೆ ಬಂದು ವಿದ್ಯಾಭ್ಯಾಸವನ್ನು ಪ್ರಾರಂಭಿಸಿ ಕೆಲವೇ